17

ಒಗಟುಗಳು

ಬುದ್ಧಿ ಚಾತುರ್ಯ, ಮನೋರಂಜನೆ
ಮತ್ತು ಜ್ಞಾನವೃದ್ಧಿಗೆ, ಆರಿಸಿ ತೆಗೆದು
ಪ್ರಕಟಿಸಿರುವ ಕನ್ನಡ ಒಗಟುಗಳು.

[ದ್ವಿತೀಯ ಮುದ್ರಣ]

ಸಂಗ್ರಾಹಕರು:

ಟಿ. ಚಂದ್ರರಾಜ ಸೆಟ್ಟಿ,

ಸಿದ್ಧಕಟ್ಟೆ.

1955.

ಒಂದಾಣೆ ಮಾಲೆ

ಒಂದಾಣೆ ಮಾಲೆಯಲ್ಲಿ ಈ ವರೆಗೆ ಪ್ರಕಟವಾದ ಪುಸ್ತಕಗಳು

೧. *ಕೆಪ್ಪಟಿರಾಯ (ವಿನೋದ ಕಥೆ)
೨. *ನಾರೀಶ್ವರರು (ಏಕಾಂಕ ಪ್ರಹಸನ)
೩. *ಕಳ್ಳನಿಗೆ ಸಂಭಾವನೆ ಮತ್ತು ಇತರ ಕಥೆಗಳು.
೪. *ಸದ್ರಿಸುಬ್ಬ (ಏಕಾಂಕ ಪ್ರಹಸನ)
೫. *ಅದ್ಭುತತ್ಯಾಗ ಮತ್ತು ಇತರ ಕಥೆಗಳು
೬. ಚುನಾವಣೆ ಅರ್ಥಾತ್ ಬನಾವಣೆ (ಏಕಾಂಕ ಪ್ರಹಸನ)
೭. *'ಬೀಡಿ ಸೇದಬೇಡಿ' ಮತ್ತು 'ಆ ಮಗು' (ವಿನೋದ ಕಥೆಗಳು)
೮. ಇಂಗ್ಲಿಷ್-ಕನ್ನಡ ಅರ್ಥಕೋಶ
೯. *ಲಂಚಕ್ಕೆ ಸಂಚಕಾರ
೧೦. ಟಿಶ್ಯೂ ಔಷಧಿಗಳ ಕೈಪಿಡಿ.
೧೧. ಶ್ರೀಕ್ಷೇತ್ರ ಧರ್ಮಸ್ಥಳ (ದ್ವಿ. ಮುದ್ರಣ)
೧೨. ಜೀವದ ಮೌಲ್ಯ ಮತ್ತು ಇತರ ಕಥೆಗಳು
೧೩. ಸತ್ತವನ ಸೇಡು ಮತ್ತು ಇತರ ಕಥೆಗಳು
೧೪. ವೆಂಕಟನ ಸಂಕಟ (ಏಕಾಂಕ ಪ್ರಹಸನ)
೧೫. ಬಾಬಿಗೆ ಬಾಸಿಂಗ (ಏಕಾಂಕ ಪ್ರಹಸನ)
೧೬. ವೇಣೂರಿನ ಗತವೈಭವ.
೧೭. ಒಗಟುಗಳು [ದ್ವಿತೀಯ ಮುದ್ರಣ]
೧೮. ಜಗಳಗಂಟ ಮತ್ತು ಇತರ ಕಥೆಗಳು
೧೯. ರಥೋತ್ಸವ.
೨೦. ಕರಿನಾಯಿ ಮತ್ತು ಮುಪ್ಪು
೨೧. *ಭಾರತದ ಮಹಾನಗರಗಳು (ಭಾಗ ೧)
೨೨. ತಿರುಕ್ಕುರಲ್
೨೩. ಸೂರ್ಯನ ಸಂಸಾರ ಮತ್ತು ಇತರ ಕಥೆಗಳು.
೨೪. ಭಾರತದ ಮಹಾನಗರಗಳು (ಭಾಗ ೨)
೨೫. ಧೈರ್ಯ ಮತ್ತು ಇತರ ಸತ್ಯಕಥೆಗಳು.
೨೬. ಮಾರಾವತಾರ (ಏಕಪಾತ್ರ ಯಕ್ಷಗಾನ ಪ್ರಬಂಧ)
೨೭. ಹಾಸವಿಲಾಸ (ನಗೆಹನಿಗಳು)
೨೮. ಸತ್ಯವಂತ ಬಾಬಿ (ಏಕಾಂಕ ಪ್ರಹಸನ)
೨೯. ಜಾಣ್ಮೆಯ ಒಗಟುಗಳು
೩೦. ಜಾತಕ ಕಥೆಗಳು
೩೧. ಕಾರ್ಕಳದ ಚರಿತ್ರೆ
೩೨. ಮರ್ಜಿ (ಏಕಾಂಕ ಪ್ರಹಸನ)
೩೩. ದರ್ಶನದ ಕಥೆಗಳು
೩೪. ಅಳುವಿನ ಹೊಳೆ ಮತ್ತು ಕೇಶವಭೂಪ (ಮಕ್ಕಳ ಕಥೆಗಳು)
೩೫. ಶರಾಬಿನ ಸಿಪಾಯಿಗಳು
೩೬. ಉಪದೇಶ ಶತಕ
೩೭. ನಿಮಗೆ ಗೊತ್ತಿದೆಯೇ?
೩೮. ಚತುರ ಚಮತ್ಕಾರ
೩೯. ಸತೀ ಸಾವಿತ್ರಿ
೪೦. ಆಭರಣಗಳ ಪೆಟ್ಟಿಗೆ ಇತರ ಕಥೆಗಳು
೪೧. ಭಾರತದ ಮಂತ್ರಿಮಂಡಲಗಳು
೪೨. ಕಾಲುಬಳೆಯ ಕಥೆ
೪೩. ಭಾರತದ ನಾಲ್ಕು ಕಲಶಗಳು
೪೪. ವ್ಯಸನದಿಂದ ಲಾಭ ಮತ್ತು ಇತರ ಕಥೆಗಳು

* ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ಈ ವರೆಗೆ ನಾಲ್ವತ್ತನಾಲ್ಕು ಪುಸ್ತಕಗಳಲ್ಲಿ, ನಾಲ್ವತ್ತನಾಲ್ಕು ಆಣೆಗಳಿಗೆ, 'ಒಂದಾಣೆ ಮಾಲೆ'ಯು, ಹೊದಿಕೆ ಕೂಡಿ, 976 ಪುಟಗಳನ್ನು ಕೊಟ್ಟಿರುತ್ತದೆ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ, ಮಂಗಳೂರು-

ಒಗಟುಗಳು

೧ ಅಕ್ಕನ ಕೈಗೆ ಪಚ್ಚೆಯ ಕಡಗ ಹಾಕುವರುಂಟು, ತೆಗೆವವರಿಲ್ಲ.

೨ ಅಕ್ಕನ ಮನೆಯ ಬೆಳಕು ತಂಗಿಯ ಮನೆಯಲ್ಲಿ ಕಾಣುತ್ತೆ.

೩ ಅಕ್ಕರಿಗೆ ಆರು ಕಣ್ಣು, ಮುಕ್ಕರಿಗೆ ಮೂರು ಕಣ್ಣು, ತೋಟದ ಅಜ್ಜನಿಗೆ ಒಂದೇ ಕಣ್ಣು.

೪ ಅಗಣಿ ಗೂಟದ ಮೇಲೆ ಅಪ್ಪಯ್ಯ ಕೂತಿದ್ದಾನೆ. ಬಂದವರಿಗೆಲ್ಲ ಬೆಂಕಿ ಕೊಡ್ತಾನೆ.

೫ ಅಜ್ಜ ತುಂಬಿಕೊಂಡಿದ್ದಾನೆ, ತಂದೆ ತಂದುಹಾಕುತ್ತಾನೆ, ಮಗ ಖರ್ಚು ಮಾಡುತ್ತಾನೆ.

೬ ಅಡವಿಯೊಳಗೆ ಹುಟ್ಟುವುದು, ಅಂಗವೆರಡಾಗುವುದು, ಕಡು ಸ್ವರದಿಂದ ಗಾನಮಾಡುವುದು, ಕಂಜಾಕ್ಷಿಯರ ಕರದಲ್ಲಿ ನಲಿದಾಡುವುದು, ಎಂಜಲನು ಉಣಿಸುವುದು ಮೂರು ಜಗಳೆ.

೭ ಅಡ್ಡ ಮರದಲ್ಲಿ ಮುಳ್ಳುಹಕ್ಕಿ.

೮ ಅಡ್ಡ ಕೊಯ್ದರೆ ಚಕ್ರ, ನೀಟ ಕೊಯ್ದರೆ ಶಂಖ, ಬಿಡಿಸಿದರೆ ಹತ್ತಿಪ್ಪತ್ತು, ಮೂಸಿದರೆ ವಾಸನೆ.

೯ ಅಡಿ ಕಂಬ, ನಡು ಮಡಕೆ, ಕಡೆ ಕುಡಿಕೆ, ಮೇಲೆ ಹುಲ್ಲು.

೧೦ ಅಡಿಗೆ ಮನೆಯಲ್ಲಿರುತ್ತೇನೆ, ಹೆಂಗುಸಲ್ಲ; ಕೆಲಸ ಮಾಡುತ್ತೇನೆ, ಜೀವವಿಲ್ಲ; ಸುತ್ತಿಸುತ್ತಿ ದಣೀತ್ತೇನೆ, ಗಾಣ ಅಲ್ಲ; ಇದನ್ನು ಹೇಳದಿದ್ದವರಿಗೆ ಬುದ್ಧಿ ಇಲ್ಲ.

೧೧ ಅತ್ತಿತ್ತ ಹೋಯಿತು, ನಡುವೆ ಬಂದು ಕುಳಿತಿತು.

೧೨ ಅತ್ತೆ ಕಾಯಿ, ಮಾವನ ಕಾಯಿ, ಸವತಿ ಕಾಯಿ, ಎಲೆಗೊಂದು ಕಾಯಿ, ಜೋಗಿಗೊಂದು ಕಾಯಿ, ಭೋಗಿಗೊಂದು ಕಾಯಿ, ಇದು ಹೇಳಿದವರಿಗೆ ಎಲ್ಲ ಕಾಯಿ.

೧೩ ಅರ್ಧ ಚಂದ್ರ ಸಮಂ ವಸ್ತು, ಕಕಾರಾದಿ ಬಕಾರಾಂತ್ಯ.

೧೪ ಅರ್ಧಚಂದ್ರಾಕಾರದೊಳಿಹುದು, ಮುದ್ದು ಕೊಟ್ಟರೆ ಗದ್ದಲಿಸುವುದು.

೧೫ ಅಪ್ಪಾ! ಅಣ್ಣಾ! ಎಂದರೆ ಬಳುವುದಿಲ್ಲ, ಕೈಹಿಡಿದರೆ ಬರುತ್ತದೆ.

೧೬ ಅಮ್ಮ—ಅಪ್ಪ ಎಂದರೆ ತಗಲುತ್ತದೆ, ಅಕ್ಕ—ಅಣ್ಣ ಎಂದರೆ ತಗಲುವುದಿಲ್ಲ.

೧೭ ಅಯ್ಯಯ್ಯೊ ಜೋಗಿ! ಮೈಯೆಲ್ಲಾ ತೂತು.

೧೮ ಅರಳುವುದು ಹೂವಾಗಿ, ಹೂ ಜಾತಿಯಲ್ಲ.
ಕೊಳೆದ ಕೆಂಡದ ಬಣ್ಣ, ಪರಿಮಳವು ಇಲ್ಲ.
ಬಿಸಿಲ ಬೇಗೆಗೆ ಬಾಡಿ ಬೀಳುವುದು ಇಲ್ಲ.
ಬಗೆಬಗೆಯ ಬಣ್ಣವೂ ಅದಕಿಲ್ಲದಿಲ್ಲ.

೧೯ ಅರಸು ಮಕ್ಕಳಿಗೆ ಅರದೆಲೆ ಕುಲಾವಿ.

೨೦ ಅಂಕುಡೊಂಕಿನ ಮರ, ಸಂಕೋಲೆ ಕೂಡಿದ ಮರ. ಹತ್ತಿದವರಿಗೆ ಸುಖ, ಹೊತ್ತವರಿಗೆ ಕಷ್ಟ.

೨೧ ಅಂಕುಡೊಂಕಾದ ಬಾವಿ, ಶಂಖ ಚಕ್ರದ ಬಾವಿ, ಪಣಕಿ ನೋಡಿದರೂ ಕುಣುಕು ನೀರಿಲ್ಲ.

೨೨ ಅಂಕುಡೊಂಕಿನ ಮರ, ಸಂಕೋಲೆ ಬಿಗಿದ ಮರ, ಕಚ್ಚಿದವರ ಬಾಯಿಗೆ ನೀರು ಹೊಯ್ಯುವ ಮರ.

೨೩ ಅಂಕುಡೊಂಕು ಸಂಕಪಾಲ, ಮೂರು ತಲೆ ಹತ್ತು ಕಾಲು.

೨೪ ಅಂಗಡಿಯಲ್ಲಿ ಮಾರುವುದಲ್ಲ, ತಕ್ಕಡಿಯಲ್ಲಿ ತೂಗುವುದಲ್ಲ, ಇದಿಲ್ಲದೆ ಶುಭ ಕಾರ್ಯವಾಗುವುದಿಲ್ಲ.

೨೫ ಅಂಗಡಿ ಅಂಗಡಿ ಒಂದೇ ಅಂಗಡಿ,
ದೃಷ್ಟಿಸಿ ನೋಡಿದರೆ ಅರುವತ್ತಂಗಡಿ.

೨೬ ಅಂಗಡಿಯಿಂದ ಬಂದ, ಕೋಟು ಬಟ್ಟೆ ಬಿಚ್ಚಿದ, ಬಾವಿಯಲ್ಲಿ ಧುಮುಕಿದ.

೨೭ ಅಂಗಡಿಯಿಂದ ತರುವುದು, ಮುಂದಿಟ್ಟುಕೊಂಡು ಅಳುವುದು.

೨೮ ಅಂಗಡೀಲಿರುತ್ತೆ ಜಂಬುನೇರಳೆ,
ಕೊಂಡೋರುಂಟು ತಿಂದೋರಿಲ್ಲ.

೨೯ ಅಂಗಾಲು ಮೇಲಾಗಿ ನೀರು ಕುಡಿವಾತ।
ಮೂಗಿನವ ಬರುತ್ತಾನೆ ಅತ್ತಿತ್ತ ಸಾರು॥
ನಿನಗಾರು ಪೇಳಿದರು? ಕಣ್ಣಿಲ್ಲದವನೆ।
ನನಗೊಬ್ಬ ಹೇಳಿದನು ತಲೆಯಿಲ್ಲದವನು॥

೩೦ ಅಂಗೈ ಹೊರಗೆ ತಲೆ ಹೊರಗೆ,
ಪುರುಷನಾ ನುಂಗಿತು, ತಂಗಿ ನೀ ಬಲ್ಲೆಯಾ ಹೇಳೆ.

೩೧ ಅಂಗೈಯಗಲದ ಗದ್ದೆ,
ಗದ್ದೆಗೆ ನೀರು, ನೀರಿಗೆ ಬೇರು, ಬೇರಿಗೆ ಬೆಂಕಿ.

೩೨ ಅಂದವಾದ ಪ್ರಾಣಿ—ಗಿಣಿ ಹಕ್ಕಿಯಲ್ಲ,
ಕೊಂಬುಗಳು ಅದಕುಂಟು—ಹಸುವೂ ಅಲ್ಲ,
ಓಡುವುದು ಜೋರಾಗಿ—ಕುದುರೆಯೂ ಅಲ್ಲ,
ಚುಕ್ಕೆಗಳು ಮೈಮೇಲೆ ನೀವು ಹೇಳಿರಲ್ಲ.

೩೩ ಅಂಬಾರು ಅಂಬಾರು ಹಾರುತ್ತೆ,
ನೀರು ನೀರು ಕಾರುತ್ತೆ.

೩೪ ಆಕಾಶದಲ್ಲಿ ಕತ್ತಿ ನೇತಾಡುತ್ತದೆ.

೩೫ ಆಕಾಶದ ಗೀತ—ಹೇಳೋರಾರು?

೩೬ ಆಕಾಶದಲ್ಲಿ ಹಾರುತ್ತೇನೆ—ಪಕ್ಷಿಯಲ್ಲ; ಬಾಲ, ಕಿವಿಗಳಿವೆ—ಮೃಗವಲ್ಲ; ಇದಕ್ಕೆ ಯಜಮಾನನಿದ್ದಾನೆ—ಕುದುರೆಯಲ್ಲ.

೩೭ ಆದಿನ ಅಂತ್ಯನ ಮಧ್ಯೆಯು ಇಹುದು, ನಿನಗುಂಟು—ನನಗುಂಟು, ಎಲ್ಲರಿಗೆ ಬೇಕಿಹುದು.

೩೮ ಆನೆಕಲ್ಲು ಮಳೆಬಿದ್ದು, ಜಾನಕಲ್ಲು ಕೆರೆ ತುಂಬಿ ನಾಲ್ಕು ಜನ ಅಕ್ಕತಂಗಿಯರು ನೆನೆಯದೆ ಬರ್ತಾರೆ.

೩೯ ಆರು ಧಾರೆಗಳುಂಟು—ಹೀರೆಕಾಯಲ್ಲ. ಒಳಗೆ ಹುಳಿಯುಂಟು—ಹುಣಸೆ ಹಣ್ಣಲ್ಲ. ಮೇಲೆ ಹಳದಿಯುಂಟು—ನಿಂಬೆ ಹಣ್ಣಲ್ಲ. ಹೇಳಬಲ್ಲ ಜಾಣರಿಗೆ ಅರಿದಲ್ಲದಿಲ್ಲ.

೪೦ ಆರು ಮೈಲು ಓಡುವ ಕುದುರೆ ನೀರು ಕಂಡಲ್ಲಿ ನಿಲ್ಲುವ ಕುದುರೆ.

೪೧ ಇಬ್ಬರು ಊಟಕ್ಕೆ ಕೂತಿದ್ದಾರೆ, ಅವರಲ್ಲಿ ಒಬ್ಬನಿಗೆ ಸ್ವಲ್ಪ ಹೆಚ್ಚು ಬಡಿಸಿದರೆ ಮತ್ತೊಬ್ಬನು ಏಳುತ್ತಾನೆ.

೪೨ ಇಬ್ಬರು ಶೂರರು ಕಣ್ಣಿಗೆ ಕಪ್ಪಿಲ್ಲಂತ ಅಳುತ್ತಾ ಬರ್ತಾರೆ.

೪೩ ಉದ್ದ ಮರದ ಮೇಲೆ ಕೆಂಪು ಸನ್ಯಾಸಿ.

೪೪ ಉಂಡ ತಿಂದ ಗೋಡೆ ಧುಮುಕಿದ.

೪೫ ಊಟಕ್ಕೆ ಕೂತವರು ಹನ್ನೆರಡು ಜನ, ಬಡಿಸುವವರು ಇಬ್ಬರು. ಒಬ್ಬನು ಒಬ್ಬನಿಗೆ ಬಡಿಸುವಷ್ಟರಲ್ಲಿ, ಮತ್ತೊಬ್ಬನು ಹನ್ನೆರಡು ಜನಕ್ಕೂ ಬಡಿಸುತ್ತಾನೆ.

೪೬ ಊರಿಂದೂರಿಗೆ ಹೋಗುತ್ತಿದ್ದರೂ, ನಿಂತಲ್ಲೇ ಇರುವೆನು.

೪೭ ಊರೆಲ್ಲಾ ತಿರುಗುತ್ತಾನೆ, ಮನೆಗೆ ಬಂದರೆ ಮೂಲೇಲಿ ಕೂರುತ್ತಾನೆ.

೪೮ ಊರೊಳಗೆ ಇರುತ್ತೇನೆ—ತೆರಿಗೆ ಕೊಡುವುದಿಲ್ಲ. ಮನೆಯೊಳಗೆ ಇರುತ್ತೇನೆ—ಮನುಷ್ಯನಲ್ಲ. ನೆತ್ತರು ಕುಡಿಯುತ್ತೇನೆ—ಕಾಡು ಪಶುವಲ್ಲ.

೪೯ ಎಣ್ಣೆಯಿಲ್ಲ, ಬತ್ತಿಯಿಲ್ಲ, ನಂದಿಹೋಗದ ನಂದಾದೀಪ, ಜಗವನು ಬೆಳಗುತ ಎಂದೆಂದೂ, ಜಗಕೆ ಜೀವತಾನೆನಿಸಿಹನೆಂದೂ.

೫೦ ಎಕ್ಕಣಂದ ಬಂದರೂ ಕುತ್ತಿಗೆಗೆ ಕೈಹಾಕುವರು.

೫೧ ಎದುರು ಎದುರು ಅಂಗಡಿ, ಬಿದಿರಿನ ಚಾವಡಿ, ಹೊಕ್ಕವರುಂಟು, ಹೊರಟವರಿಲ್ಲ.

೫೨ ಎರಡು ಕಾಲುಗಳಿವೆ–ಮಾನವನಲ್ಲ, ವೇಗವಾಗಿ ಓಡುತ್ತದೆ–ಕುದುರೆಯಲ್ಲ, ಮನುಷ್ಯನ ಸೇವಕನೆಂದರೆ ಜೀವವಿಲ್ಲ,ಇದ ಹೇಳಬಲ್ಲವರಿಗೆ ಒಂದು ಥಡೆ ಬೆಲ್ಲ

೫೩ ಎರಡು ಕೆರೆಗೆ ಒಂದೇ ಏರಿ.

೫೪ ಎಲ್ಲರಿಗೆ ಮುಖ ತೋರಿಸಿ, ಬೆನ್ನು ಕೆರೆದರೆ ನಾ ಕೆಟ್ಟೆ.

೫೫ ಎಲುಬಿಲ್ಲದ ಕುದುರೆ ಹತ್ತಿಕೊಂಡು ನಾಲಗೆಯಿಲ್ಲದ ನಾಯನ್ನಿಡಿದು ಗಿಡವಿಲ್ಲದ ದೇಶಕ್ಕೆ ಹೋಗಿ ತೊಡೆಯಿಲ್ಲದ ಮೃಗವನ್ನು ಹಿಡಿದರಂತೆ.

೫೬ ಎಲೆ ಉಂಟು ಅಡಿಕೆ ಉಂಟು–ವೀಳ್ಯ ತಾನಲ್ಲ. ಜಡೆಯುಂಟು ಮಡಿಯುಂಟು–ತಪಸಿ ಮೊದಲಲ್ಲ, ಒಡಲಲ್ಲಿ ಹಾಲುಂಟು–ಕಾಮಧೇನು ತಾನಲ್ಲ ಇದ ಹೇಳಬಲ್ಲ ಜಾಣರಿಗೆ ಸಮನಿಲ್ಲ.

೫೭ ಎಲೆಗೆರಸಿ, ಕಾಯಿ ಕಹಿ, ಹಣ್ಣು ಸಿಹಿ

೫೮ ಏಳುತಲೆ ಕೆಂಪುಂಟು, ಹತ್ತುತಲೆ ಬಿಳಿಯು, ಬೀಳುತಲೆ ಕಪ್ಪು ಕತ್ತಲೆಯಾಯ್ತು ತಿಳಿಯು.

೫೯ ಏಳು ದೋಸೆ, ಆರು ದೋಸೆ, ಹತ್ತು ದೋಸೆ, ಒಟ್ಟು ಎಷ್ಟು ದೋಸೆ?

೬೦ ಒಬ್ಬ ಅಣ್ಣ, ಒಬ್ಬ ತಮ್ಮ; ಅಣ್ಣ ಹನ್ನೆರಡು ಮೈಲು ನಡೆಯುವಾಗ ತಮ್ಮ ಒಂದೇ ಮೈಲು ನಡೆಯುತ್ತಾನೆ.

೬೧ ಒಳ್ಳೇ ಹುಡುಗಿಗೆ ಒಂಭತ್ತು ಬೈತಲೆ.

೬೨ ಒಂಟಿ ಕಾಲಿನ ಹಕ್ಕಿಗೆ ಒಂಭೈನೂರು ಮೊಟ್ಟೆ.

೬೩ ಒಂದಂಕಣದ ಮನೆಯನು ಮಾಡಿ ಅಣಿಗೊಳಿಸಿ ಹೂಡಿ।
ಚೆಂದವನ ಕರೆತಂದು ಒಳಗಡೆಯೆ ದೂಡಿ॥
ಒಂದಾಗಿ ಇಬ್ಬರು ವನಿತೆಯರು ಕೂಡಿ।
ಒಂದಡಿಯ ಮೆಟ್ಟಿದರೆ ನೂರಾಯ್ತು ನೋಡಿ॥

೬೪ ಒಂದು ಮನೆಗೆ ಒಂದೇ ಕಂಬ.

೬೫ ಒಂದು ಕೊಂಬಿನ ಗೂಳಿ, ತಲೆಯೆಲ್ಲಾ ಮುಳ್ಳು.

೬೬ ಒಂದು ಕಂಬಕ್ಕೆ ನಾಲ್ಕು ಕಿವಿ.

೧೭ ಒಂದು ಬಾವಿ ಅಗೆದೆ; ಸುರುವಿಗೆ ಮಣ್ಣು ಸಿಕ್ಕಿತು, ಆಮೇಲೆ ಪಾದೆ ಸಿಕ್ಕಿತು, ಆಮೇಲೆ ಜೇಡಿ ಸಿಕ್ಕಿತು, ಆಮೇಲೆ ನೀರು ಸಿಕ್ಕಿತು.

೧೮ ಒಂದು ಪಟ್ಟಣದಲ್ಲಿ ಇಬ್ಬರು ಅರಸರು;—ಸೇನೆಯಿದೆ, ಕಾಳಗ ಮಾಡ್ತಾರೆ, ಊಟ ಉಡಿಗೆ ಇಲ್ಲ, ಮಾತುಕತೆ ಇಲ್ಲ.

೧೯ ಒಂದೇ ಒಂದಾದರೂ ಮನೆಯೆಲ್ಲ ತುಂಬಿಸುತ್ತೆ.

೨೦ ಒಂದೇ ಮನೆಯಲ್ಲಿ ಇಬ್ಬರು ಮಕ್ಕಳು, ಒಬ್ಬನ ಕಂಡರೆ ಮತ್ತೊಬ್ಬ ಓಡುವನು.

೨೧ ಕಗ್ಗಲ್ಲು ಸೋಪಾನ, ಬಿಳಿಗಲ್ಲು ಸೋಪಾನ, ಒಳಗೆ ಪನ್ನೀರು ಬಾವಿ.

೨೨ ಕಚ್ಚಿದರೆ ಕಚ್ಚುವುದು, ಕಿಚ್ಚುಂಟು ಚೇಳಲ್ಲ.

೨೩ ಕಚ್ಚಿದರೆ ಕಿಚ್ಚಾಗುವೆ, ಕೊಕ್ಕುಂಟು ಕೂಗಲಾರೆ, ರೆಕ್ಕೆಯುಂಟು ಹಾರಲಾರೆ, ನೆಲದೊಳಗೆ ಹೊಕ್ಕರೂ ನನ್ನ ಬಿಡರು.

೨೪ ಕಟಕಟ ಕಿಟಕಿಟ, ಜಂಬೂಕಿ ಜಾನಕಿ, ನೀ ಕಟ್ಟಿದ ಮನೆಗೆ ಕಂಬವಿಲ್ಲ.

೨೫ ಕಟ್ಟೆ ಇಲ್ಲದ ಕೆರೆಯಲ್ಲಿ ತಟ್ಟೆ ತೇಲಿ ಹೋಯಿತು.

೨೬ ಕಡಿದರೆ ಉದ್ದವಾಗುವುದು ಯಾವುದು?

೨೭ ಕಣ್ಣೆರಡು ಕಾಲೊಂದು ಕುಣಿದಾಡುತಿಹಳು, ಬಣ್ಣಿಸಿ ನೋಡಿದರೆ ಮೂರಕ್ಷರದವಳು, ಹೆಣ್ಣುಮಕ್ಕಳ ಕೂಡೆ ಒಡನಾಡುತಿಹಳು.

೨೮ ಕತ್ತಲೆಯಲ್ಲಿ ಕತ್ತಿ ಬೀಸಿತು.

೨೯ ಕತ್ತಲೆಯ ಮನೆಯಲ್ಲಿ ಕಾಳಪ್ಪ ಕುಂತವನೆ, ಮುಟ್ಟಿದರೆ ಕುಯ್ಯೋ ಮುರ್ರೋ ಅಂತವನೆ.

೩೦ ಕತ್ತಲೆಯ ಮನೆಯಲ್ಲಿ ಮಣಿಯಮ್ಮ ಕುಂತ್ಕೊಂಡು, ಬಂದವರಿಗೆಲ್ಲಾ ಬೆಂಕಿ ಕೊಡುತ್ತಾಳೆ.

೩೧ ಕಪ್ಪಗಿದೆ—ಕಾಗೆಯಲ್ಲ, ಗಿಡವೇರುವುದು—ಮಂಗವಲ್ಲ, ತಲೆ ದೊಡ್ಡದು—ಆನೆಯಲ್ಲ, ನಡು ಸಣ್ಣ—ಸಿಂಹವಲ್ಲ.

೩೨ ಕರ್ರಗೆ ಕಾಲುಂಗುರದವಳೇ, ಸರ್ರನೇ ಹೋಗಿ ಬಿರ್ರನೆ ಬಾ

೩೩ ಕರಿಯ ಗಿಡ್ಡನಿಗೆ ಬಿಳಿಯ ನಾಮ.

೩೪ ಕರಿ ಕಂಬಳಿ ಪರ್ವತ ಗೌಡ, ಸರಿ ಹೊತ್ತಿನಲ್ಲಿ ಓಡಾಡುತ್ತಾನೆ.

೩೫ ಕರಿಯ ಕಾಡಿನಲ್ಲಿ ಕರಿ ಕುರಿ ಮೇಯುತ್ತೆ.

೩೬ ಕರಿಯ ಸೀರೆಯ ಗರತಿ, ಪೇಟೆಯೊಳಗೆ ಸಿಕ್ತಿ, ರೊಕ್ಕ ಕೊಟ್ಟರೆ ಬರ್ತಿ.

೩೭ ಕರಿಯ ಮೈಯ ಗರತಿ, ಕಾಲುಂಗುರ ಇಡುತಿ, ಕುಳಿಯಲ್ಲಿ ಕುಣಿಯುವೆ, ಏರಿನಲ್ಲಿ ಕೂರುವೆ.

೮೮ ಕರಿಯ ಕಾಂತಣ್ಣನಿಗೆ ಬಿಳಿಯ ಮುಂಡಾಸು.

೮೯ ಕರೀ ಮಣಿ ಸರ ಕೊರಳಿಗೆ ಆಗೋಲ್ಲ.

೯೦ ಕಲ್ಲರಳಿ ಹೂವಾಗಿ ಎಲ್ಲರಿಗೆ ಬೇಕಾಗಿ,
ಮಲ್ಲಿಕಾರ್ಜುನನ ಶಿಖರಕ್ಕೆ ಬೆಳಕಾಗಿ,
ಬಲ್ಲವರು ಹೇಳಿ ಸರ್ವಜ್ಞ ॥

೯೧ ಕಲ್ಲಾಗಿ ಹುಟ್ಟಿ ಜಂಜಾಟಕ್ಕೆ ಸಿಲ್ಕಿದೆನು ।
ಬೆಂಕಿಯಲ್ಲಿ ಧುಮುಕಿದೆನು ಹೂವಾಗಿ ಅರಳಿದೆನು ।
ಮನೆಯನ್ನು ಬೆಳಗಿದೆನು ಎಲೆಯ ಸ್ನೇಹದಿಂದ ಸಣ್ಣಾಗಿ ಸತ್ತೆನು ॥

೯೨ ಕಲ್ಲು ಕಂದಕ, ಬಿಳಿ ಸಂದುಕ, ನೀರುಂಟು ಮೀನಿಲ್ಲ.

೯೩ ಕಳ್ಳ ಪಶು ಹುಲ್ಲು ಕೊಟ್ಟರೆ ತಿನ್ನದು, ಕಲ್ಲು ಕುಟ್ಟಿದರೆ ಹಾಲು ಕರೆಯುವುದು.

೯೪ ಕಂಚಿನ ತಟ್ಟೆ ಕುಸುಮೇ ರಾಶಿ, ಐದು ಮಂದಿ ಆಡ್ತಾರೆ ಇಬ್ಬರು ನೋಡುತ್ತಾರೆ. ಬಿಳೀ ಕಾವಲುದಾರರ ದಾಟಿ ಒಳಗಡೆಗೆ ಹೋದರೆ ಪರೀಕ್ಷಕನೊಬ್ಬ ಬಾರದೂರಿಗೆ ಕಳುಹಿಸುತ್ತಾನೆ.

೯೫ ಕಂಠದಲಿ ಕಪ್ಪುಂಟು ಕರಿಕಂಠನಲ್ಲ ।
ಮಿಂಟೆಯಲಿ ಶಿಖೆಯುಂಟು ವಿಪ್ರತಾನಲ್ಲ ॥
ಉಂಟು ಮೈಯಲಿ ಕಣ್ಣು ದೇವೇಂದ್ರನಲ್ಲ ।
ಸೃಷ್ಟಿಯಲ್ಲಿ ಹರಿಹರಾ ಬ್ರಹ್ಮ ತಾನಲ್ಲ ॥

೯೬ ಕಾಗೆಗಿಂತ ಕಪ್ಪು ಸುಣ್ಣಕ್ಕಿಂತ ಬಿಳಿ, ನೋಡಿದರೆ ಸಣ್ಣದು, ಸಮುದ್ರಕ್ಕಿಂತ ದೊಡ್ಡದು.

೯೭ ಕಾಯಲ್ಲಿ ಮೆತ್ತಗೆ, ಹಣ್ಣಲ್ಲಿ ಗಟ್ಟಿ.

೯೮ ಕಾಲಾರು ಕೋಡೆರಡು ದೇಹ ಮೂರುಂಟು ।
ಬಾಲಂಗಳೆರಡು ಕಣ್ಣುಗಳು ಹದಿನೆಂಟು ॥
ಮೇಲೆ ಶಿರ ಒಂಭತ್ತು ಕಿವಿಗಳ್ ನಾಲ್ಕುಂಟು ।
ಹೇಳಲಿದ ಬಲ್ಲ ಜಾಣರಿಗೆ ಅರಿವುಂಟು ॥

೯೯ ಕಾಲಿಲ್ಲದಲೆ ಹರಿಗು, ತೋಳಿಲ್ಲದಲೆ ಹೊರುಗು ।
ನಾಲಿಗಿಲ್ಲದಲೆ ಉಲಿವುದಿದ ಕವಿಕುಲವ ।
ಮೇಲುಗಳೆ ಪೇಳಿ ಸರ್ವಜ್ಞ ॥

೧೦೦ ಕಾಲಿಲ್ಲದಲೆ ಹತ್ತಿ, ನಾಲಿಗೆಯಿಲ್ಲದೆ ನೆಕ್ಕಿ, ನೀರು ಕುಡಿದು ಸತ್ತುಹೋದ.

೧೦೧ ಕಾಲು ನಾಲ್ಕುಂಟು—ಪಶುವಲ್ಲ,
ಹೊತ್ತು ನಿನ್ನನ್ನು ತಿರುಗಿದೆನು—ಮನುಜನಲ್ಲ,
ತೊತ್ತಾಗಿ ಬಾಳಿವೆನು ನಿನ್ನಲ್ಲೆ ನಾನು.

೧೦೨ ಕಾಲುಗಳು ನಾಲ್ಕು ಬಾಲ ಒಂದುಂಟು,
ಸರ್ಕಸ್ಸು ಮಾಡುವನು, ತಲೆಕೆಳಗೆ ಮಾಡಿ ನಡೆಯುವನು.

೧೦೩ ಕಾಸಿನ ಕುದುರೆಗೆ ಬಾಲದಲ್ಲಿ ಲಗಾಮು.

೧೦೪ ಕಿರಿ ಎಲೆಯ ಮೇಲೆ ಕಿನ್ನರಿ ಕುಣೀತಾಳೆ.

೧೦೫ ಕುಪ್ಪಿ ಒಂದರಲ್ಲಿ ತುಪ್ಪ ಎರಡು ಬಗೆ.

೧೦೬ ಕೂತುಕೊಂಡು ಹಚ್ಚೋದು, ಬಗ್ಗಿಕೊಂಡು ಇಕ್ಕೋದು.

೧೦೭ ಕೆರೆಯ ಮೇಲೆ ಕುದುರೆ ಕೂತು, ಬಾಲದಲ್ಲಿ ನೀರು ಕುಡಿಯುತ್ತದೆ.

೧೦೮ ಕೆಳಗಿನ ಗದ್ದೆಯ ನೀರಿನಲ್ಲಿ ಮೇಲಿನ ಗದ್ದೆಯ ಬೆಳೆಯಾಗುತ್ತದೆ.

೧೦೯ ಕೈಗಳಿವೆ ಹಲವು—ರಕ್ಕಸನಲ್ಲ, ಉಂಗುರವಿದೆ ಬೆರಳಿಲ್ಲ. ಹೆಂಗಳೆಯರ ನಡುವಲ್ಲಿ ಜೋಕಾಲಿಯಾಡಿ ಗುಲ್ಲೆಬ್ಬಿಸುವ ನಾನಾರು?

೧೧೦ ಕೈಯುಂಟು ಕಾಲಿಲ್ಲ ತಲೆ ಹರಿದ ಮುಂಡ ।
ಹೊಯ್ಕುವಾಳಿಸಿ ತನ್ನ ತಾ ಹೊಯ್ಸಿಕೊಂಡ ॥
ಮೈಯಲ್ಲಿ ನೂರಾರು ಗಾಯಗಳ ಕಂಡ ।
ಒಯ್ಯನಿದ ಪೇಳಿದವ ಮೂಲೋಕ ಗಂಡ ॥

೧೧೧ ಕೈಯಿಲ್ಲ ಕಾಲಿಲ್ಲಿ ಈಜು ಮೊದಲೇ ಗೊತ್ತಿಲ್ಲ, ಹುಟ್ಟಿದಂದಿನಿಂದ ನೀರಮೇಲೆ ತೇಲುತಿರುವೆ.

೧೧೨ ಕೈಯಿಂದ ಕಲಸಣ್ಣ, ಕಾಲಿಂದ ಮೆಲಿಸಣ್ಣ, ಕೈಗೆ ಕೆಲಸಣ್ಣ, ಬೆಂಕಿಗೆ ಸುಡಿಸಣ್ಣ, ಬಡವರ ಆಧಾರಣ್ಣ, ಬಿದ್ದರೆ ಸತ್ತಣ್ಣ.

೧೧೩ ಕೆಂಪು ತಲೆಯುಂಟು—ಕಪಿಯಲ್ಲ,
ಎರಡು ಗರಿಗಳಿವೆ—ಕಾಗೆಯಲ್ಲ,
ಆರು ಕಾಲುಗಳಿವೆ—ಸೊಳ್ಳೆಯಲ್ಲ,
ಹಾಡುಹಾಡಿದರೂ ಸಂಗೀತಗಾರನಲ್ಲ.

೧೧೪ ಕೋಡಿದ್ದರೂ ಹಾಯಲಾರೆ, ಬಿಲ್ಲಿದ್ದರೂ ಹೊಡಲಾರೆ, ಬಾಲವಿದ್ದರೂ ಬೀಸಲಾರೆ, ಆಗಸದಲ್ಲಿ ನಲಿವ ನಾನಾರು?

೧೧೫ ಗಟ್ಟಿದಿಂದ ಒಂದು ಮರವನು ತಂದೆ, ಮನೆ ಕಟ್ಟಿ ಕಟ್ಟಿ ಇನ್ನೂ ಉಂಟು.

೧೧೬ ಗರಗರನೆ ತಿರುಗುವುದು ಚಕ್ರ ತಾನಲ್ಲ । ಗರಿಗಳಿರಡುಂಟು ಹಾರುವ ಪಕ್ಷಿಯಲ್ಲ ॥ ಶಿರದೊಳ್ ಕೊಂಬುಂಟು ಮೃಗಜಾತಿಯಲ್ಲ । ಎಲ್ಲರಾ ಮನೆಯೊಳಗೆ ತಾನಿಲ್ಲದಿಲ್ಲ ॥

೧೧೭ ಗಾಳಿಯಿಲ್ಲದೆ ಇರುವುದು—ಮರವಲ್ಲ, ನೀರಿನಲ್ಲಿರುವುದು—ಮೊಸಳೆಯಲ್ಲ, ಸಾಧು ಪ್ರಾಣಿಯಿದು—ಕುರಿಯಲ್ಲ.

೧೧೮ ಗಿಡ ಕೊಡಲಾರದು; ಮರ ಬೆಳೆಸಲಾರದು; ಅದಿಲ್ಲದೆ ಊಟ ಸೇರಲಾರದು.

೧೧೯ ಗಿಡ್ಡ ಗಿಡಕನಾಗಿ, ಗಿಡ ತುಂಬ ಹೂವಾಗಿ, ಹೂವಲ್ಲಿ ಕಾಯಾಗಿ, ತಿನ್ನೋದು ಬೀಜ, ಉಗುಳೋದು ಸಿಪ್ಪೆ.

೧೨೦ ಗುಜ್ಜರ ಎಮ್ಮೆ ಹೆಜ್ಜೆ ಇಲ್ಲದೆ ನಡೆಯುತ್ತದೆ.

೧೨೧ ಚಟ್‌ಪಟ್ ಲೇಡಿಗೆ ಒಂದೇ ಕಣ್ಣು.

೧೨೨ ಚಂದದ ನೂರು ಗಿಣಿಗೆ ಅಂದದ ಒಂದೇ ಕೊಕ್ಕು.

೧೨೩ ಚಿಕ್ಕ ಪೋರನಿಗೆ ಮಣ್ಣಿನ ಕೆಲಸ.

೧೨೪ ಚಿಕ್ಕ ಮನೆಗೆ ಚಿನ್ನದ ಬೀಗ.

೧೨೫ ಚಿಕ್ಕ ಮಗಳಿಗೆ ಮೈ ತುಂಬಾ ಬಿಳಿ ಬಟ್ಟೆ.

೧೨೬ ಚಿಕ್ಕ ಮನೆಯಲ್ಲಿ ಚಕ್ಕೆ ತುಂಬಿದೆ.

೧೨೭ ಚಿನ್ನದ ಗೋಡೆಗೆ ಪಚ್ಚೆಯ ಆವರಣ, ಗೋಡೆಯೊಳಗೆ ಕಪ್ಪಿನ ಸಾಸಿರ ಮಣಿಗಳು.

೧೨೮ ಚಿಂತಾಮಣಿ ಕೆರೇಲಿ ಚಿಣಿಮಿಣಿ ಹಕ್ಕಿ, ಕೆರೆ ಬತ್ತಿದರೆ ಹಕ್ಕಿ ಹಾರಿ ಮಾಯ.

೧೨೯ ಚುಂಯಿ ಚುಂಯಿ ಹಕ್ಕಿಗೆ ನೂರಾರು ಕಣ್ಣು.

೧೩೦ ಚೊಕ್ಕ ಬೆಳ್ಳಿಯ ರೊಕ್ಕ ಚೆಲ್ಲಿಹುದು, ಅದನಾಯ್ದು ಕೊಂಬುವರಿಲ್ಲ.

೧೩೧ ಡಾಕ್ಟ್ರು ಬರ್ತಾರೆ, ಇಂಜೆಕ್ಷನ್ ಕೊಡ್ತಾರೆ, ಕಾಸೂ ಕೇಳದೆ ಹೋಗ್ತಾರೆ.

೧೩೨ ತಣ್ಣಗೆ ಸಣ್ಣಗೆ ಮೈಯುಳ್ಳವನೆ, ಗೋಲಗುಲಗುಂಜಿ ಕಣ್ಣವನೆ, ಕೆಸರು ಕಂಡರೆ ಕಾಲು ಕಿಸಿಯೋಸೇ, ನಿನ್ನ ಹೆಸರೇನು?

೧೩೩ ತಂದೆ ಪಾತಾಳಕ್ಕೆ ಹೋಗಿದ್ದಾನೆ, ತಾಯಿ ಆಕಾಶಕ್ಕೆ ಹೋಗಿದ್ದಾಳೆ, ಅಣ್ಣ ಪೇಟೆಗೆ ಹೋಗಿದ್ದಾನೆ, ಅಕ್ಕ ಮದುವೆಗೆ ಹೋಗಿದ್ದಾಳೆ.

೧೩೪ ತಾತನ ತಟ್ಟೆ ಥಳಥಳ ಹೊಳೆಯುತ್ತೆ.

೧೩೫ ತಾಮ್ರದ ಚೆಂಬಿನ ತುಂಬ ನವರತ್ನ.

೧೩೬ ತಾಯಿ ಕಪ್ಪು, ತಂದೆ ಕಪ್ಪು, ಮಗ ಬಿಳಿಪು.

೧೩೭ ತಾಯಿ ದಡ್ಡೆ, ಮಗಳು ತಿರುಗಣಿ

೧೩೮ ತಾರೌ ಗಿಂಡಿ ತತ್ತರ ಗಿಂಡಿ, ಮುಚ್ಚಳ ತೆಗೆದರೆ ಮುನ್ನೂರು ಗಿಂಡಿ.

೧೩೯ ತುಂಟ ಹೈದರನಿಗೆ ರಾಜನ ಸಂಗಡಲೇ ಊಟ.

೧೪೦ ತೊಡೆಯ ಮೇಲೆ ಕೂಡ್ರಿಸುತ್ತೇನೆ—ತಾಯಿ ನಾನಲ್ಲ, ನಾಲ್ಕು ಕಾಲುಗಳು ನನಗಿವೆ—ಪಶು ನಾನಲ್ಲ, ಎರಡು ಕೈ ನನಗುಂಟು—ಮನುಷ್ಯ ನಾನಲ್ಲ.

೧೪೧ ತೊತ್ತರಿ ಮಗಳಿಗೆ ಸೊಂಟದಲ್ಲಿ ಕತ್ತಿ.

೧೪೨ ದಡಬಡ, ನನ್ನ ಎಡಗೈ ನಿನ್ನ ಹೆಗಲಿಗೆ, ನನ್ನ ಬಲಗೈ ನಿನ್ನ ಬಾಯೊಳಗೆ.

೧೪೩ ದಾರದೊಳಗೋಡುವೆನು, ಧರೆಯನ್ನು ಬೆಳಗುವೆನು, ಹುಟ್ಟಿಲ್ಲೋ ಆಳಿ ವೆಲ್ಲೋ ನಾ ಕಾಣೆ.

೧೪೪ ದೂರದಿಂದ ಗುಂಡಗಿದೆ, ಹತ್ತಿರದಿ ಒರಟಾಗಿದೆ, ನಿಂತು ನೋಡಿದರೆ ಸೊಗಸಿದೆ.

೧೪೫ ದೇವಸ್ಥಾನ ಮೇಲೆ—ಮುಗುಳಿ ಕೆಳಗೆ.

೧೪೬ ಧೊರೆ ಮುಳುಗಿದರೂ ಮುಂಡಾಸು ತೇಲುತ್ತದೆ.

೧೪೭ ನಡು ಸಣ್ಣ, ನಾಗರ ಬಣ್ಣ, ಹೊಡೆಯಲು ಹೋದರೆ ಕಡಿಯಲು ಬರುತ್ತೆ.

೧೪೮ ನಡೆದು ಮುಂಜಾನೆ ನಾಲ್ಕು ಕಾಲ್ಗಳಿಂದ,
ನಡೆಯುತ್ತಾ ಮಧ್ಯಾಹ್ನ ಕಾಲೆರಡರಿಂದ,
ಚಲಿಸಿ ಸಂಜೆಯಲಿ ತಾ ಮೂರ್ಕಾಲ್ಗಳಿಂದ
ಬಳೆದಳಿವನಿಂತಿಳೆಯೊಳಾರವನು ಕಂದ?

೧೪೯ ನನಗೆ ಎಲ್ಲಾ ಭಾಷೆಗಳಲ್ಲೂ ಒಂದೇ ರೂಪ, ನನಗೆ ಕೆಲವು ಸಾರಿ ಬೆಲೆಯುಂಟು, ಕೆಲವು ಸಾರಿ ಬೆಲೆಯಿಲ್ಲ, ಹಾಗಾದರೆ ನಾನಾರು?

೧೫೦ ನನಗೆ ಹೇಗೆ ಹೊಲಿದರೂ ಅಂಗಿ ಸರಿಯಾಗುವುದಿಲ್ಲ.

೧೫೧ ನನಗೊಬ್ಬ ನಂಟ, ಅವ ದೊಡ್ಡ ಬಂಟ, ಕೆಲಸವನ್ನು ಮಾಡಲಾರ, ಕತ್ತಲಲ್ಲಿ ಅಡಗುವನು.

೧೫೨ ನನಗೊಂದು ಅಜ್ಜಿ, ಮೈ ತುಂಬಾ ಕಜ್ಜಿ.

೧೫೩ ನನ್ನ ಮುಂದೆ ಎಲ್ಲರೂ ತಲೆಬಾಗುವರು.

೧೫೪ ನಾನು ಬಹಳ ಉದ್ದವಿದ್ದೇನೆ, ಆದರೆ ನಿಲ್ಲಲು ಶಕ್ತಿಯಿಲ್ಲ.

೧೫೫ ನಾನೊಂದು ಜತೆ ಎತ್ತು ತಂದೆ, ಎಡದ್ದು ಬಲಕ್ಕಾಗುವುದಿಲ್ಲ, ಬಲದ್ದು ಎಡಕ್ಕಾಗುವುದಿಲ್ಲ.

೧೫೬ ನಾಲ್ಕರಲ್ಲಿ ಕಾಡು, ನಾಲ್ಕರಲ್ಲಿ ಆರಿ ನಾಲ್ಕರಲ್ಲಿ ಮುಳುಗುತ್ತೆ.

೧೫೭ ನಾಲ್ಕು ಕಾಲುಗಳುಂಟು ನಡೆ ಬಾರದನಗೆ,
ಕಾಲುಗಳ ಮೇಲುಗಡೆ ಉಂಟೊಂದು ಹಲಗೆ,
ಬೆನ್ನೊಂದು ಕೈಯೆರಡು ನೋಡು ಮಗು ನನಗೆ,
ನನ್ನಲ್ಲಿ ಬಂದರೆ ದಣುವಾರುವುದು ನಿನಗೆ.

೧೫೮ ನಾಲ್ಕು ಚೌಕದ ಗದ್ದೆ, ಬಿತ್ತುವುದು ಹದಿನಾರು ಬೀಜ, ಉಳುವುದು ಎರಡೆತ್ತು

೧೫೯ ನೀರಿಗೆ ಹೋಗಬೇಡ, ನೀರು ಮುಟ್ಟಬೇಡ, ನೀರು ತಾರದೆ ಬರಬೇಡ.

೧೬೦ ನೀರಿನಿಂದ ಏಳು ಕಾಗೆ, ಮರದಲ್ಲಿ ಹತ್ತು ಕಾಗೆ,
ಬಿಸಿಲಿನಲ್ಲಿ ಆರು ಕಾಗೆ ಎಂದರೆ ಎಷ್ಟು ಕಾಗೆ?

೧೬೧ ನೀರಿಲ್ಲದ ಸಮುದ್ರ, ಜನರಿಲ್ಲದ ಪಟ್ಟಣ, ಸಂಚಾರವಿಲ್ಲದ ಮಾರ್ಗ

೧೬೨ ನೀರಿನಲ್ಲಿ ತಿರುಗುವೆನು—ಮೀನಲ್ಲ, ಮನುಷ್ಯನ ಸೇವಕನು—ಜೀವಿಯಲ್ಲ, ಎಲ್ಲಿ ಹೋದರೂ ಹೆಜ್ಜೆ ಕಾಣುವುದಿಲ್ಲ.

೧೬೩ ನೀರಿನಲ್ಲಿ ಹುಟ್ಟಿ ನೀರಿನಲ್ಲಿ ಬೆಳೆದು ನೀರು ಕಂಡರೆ ಹರಿದೋಡುವುದು.

೧೬೪ ನೀರಿನಲ್ಲಿ ನೆನೆಯದ ತೆನೆಯಿರದ ಕಾಳು,
ನೀರಿಂದಳಿಯದ ಬೀಸಲಾರದ ಕಾಳು,
ದೇಶವಾರಿಸುವುದು ಹಣಕೊಂದು ಕಾಳು,
ಯಾರಿಗೆ ಗೊತ್ತಿಲ್ಲ ಸಾರಿಯರ ಬಾಳು.

೧೬೫ ನುಚ್ಚಿನಂಗಡಿ, ನೂರೊಂದಂಗಡಿ,
ಪಟ್ಟಿ ಹಾಕಿದ ಪಂಡಿತರಂಗಡಿ,
ಮುಚ್ಚಿ ನೋಡಿದರೆ ಒಂದೇ ಅಂಗಡಿ.

೧೬೬ ನೂರಾರು ಗೋಡೆಗಳ ಮನೆ, ಮನೆಗಿರುವುದು ಗೋಡೆಯಷ್ಟೇ ದೊಡ್ಡ ಬಾಗಿಲು, ಮುಂದೊಂದು ಹಿಂದೊಂದು.

೧೬೭ ನೆತ್ತಿಯಲಿ ಮುಕ್ಕುವುದು, ಸುತ್ತಲೂ ಬಿಕ್ಕುವುದು, ಎತ್ತಿದರೆ ಹೋಳೆರಡು, ಉತ್ತರಿಸು ನೀ ಬಾಲ.

೧೬೮ ನೆತ್ತಿಯ ಗುದ್ದಿ ನೀರು ಕುಡಿದರೆ ಹೊಟ್ಟೆ ಹಗುರ.

೧೬೯ ನೆಲದಲ್ಲಿ ಹುಟ್ಟಿ ಬೆಳೆಯುವೆನು ಮರವಲ್ಲ,
ಹೂವು ಕಾಯಿ ಬಿಡುವ ಗಿಡವಲ್ಲ,
ನಡೆದು ಹೋಗುವವರಿಗೆ ಸುಖವಿಲ್ಲ.

೧೭೦ ನೆಲೆಯಿಲ್ಲದ ಹೊಂಡದಲ್ಲಿ ಎಲುಬಿಲ್ಲದ ಪ್ರಾಣಿ.

೧೭೧ ನೋಡಲು ಕರಿಯಪ್ಪ, ಬೀಡೊಳು ಸುಮ್ಮಪ್ಪ, ಕಾಡೊಳು ಡುಮ್ಮಪ್ಪ, ಇವನ್ಯಾರಪ್ಪ?

೧೭೨ ನೋಡೋಕೆ ಮುಳ್ಳಿ, ಇಟ್ಟರೆ ಕೊಳ್ಳಿ.

೧೭೩ ಪಚ್ಚೆಕಲ್ಲಿನ ಪ್ರಾಕಾರ, ಒಳಗೆ ಚಿನ್ನದ ಗುಡಿಗಳು, ಅವುಗಳ ಮಧ್ಯೆ ಬೆಳ್ಳಿಯ ಲಿಂಗ.

೧೭೪ ಪುಟ್ಟ ಪುಟ್ಟ ದೇವರಿಗೆ ಬಗ್ಗಿ ಬಗ್ಗಿ ನಮಸ್ಕಾರ.

೧೭೫ ಪೆಟ್ಟಿಗೆ ಒಲೆಯಲಿ ಗರಗರ ತಿರುಗಿಸಿ, ಕಪ್ಪಿನ ದೋಸೆ ಬಲು ರುಚಿ, ಬಾಯಿಗೆ ಅಲ್ಲ.

೧೭೬ ಬಚ್ಚಿಟ್ಟು ಕೊಂಡಿರುತ್ತೆ, ಬಂದವರ ಕಾಲೆತ್ತಿಸುತ್ತೆ, ಬೆನ್ನು ಬಗ್ಗಿಸುತ್ತೆ.

೧೭೭ ಬಣ್ಣ ಬಣ್ಣವಿದ್ದರೂ ಗಿಳಿಯು ನಾನಲ್ಲ,
ನಾಲಿಗೆಗಳೆರಡಿದ್ದರೂ ಉರಗಜಾತಿಯವನಲ್ಲ,
ವಿಷವು ಹೊಟ್ಟೆಯೊಳಗಿದ್ದರೂ ಕಂಠಕಂಠನಲ್ಲ,
ಎಲ್ಲರ ಮನೋಗತವನ್ನೆಲ್ಲಾ ತಿಳಿಸುವೆನಲ್ಲ.

೧೭೮ ಬರೀ ಭಸ್ಮ ಬ್ರಹ್ಮರಂಧ್ರಕ್ಕೆ.

೧೭೯ ಬಂಗಾರದ ಗಿಣಿ ಬಾಗಿಲು ಕಾಯುತ್ತೆ.

೧೮೦ ಬಾಯಿಯಿದೆ ನಾಲಗೆ ಇದೆ, ಹಾವಿನಂತೆ ದೇಹವಿದೆ, ಎಲ್ಲರಲ್ಲೂ ಬಳಕೆಯಿದೆ.

೧೮೧ ಬಾಯಿಯಿಲ್ಲದ ಬಳ್ಳಿ ಬಾರಿಬಾರಿಗೂ ಕೂಗಿ ಮಾತಾಡುತ್ತದೆ.

೧೮೨ ಬಾಲ ಹಿಡಿದರೆ ಗುರುಗುಟ್ಟುತ್ತದೆ.

೧೮೩ ಬ್ರಾಹ್ಮಣ ಸುಟ್ಟರೂ ಜನಿವಾರ ಸುಡಲಿಲ್ಲ.

೧೮೪ ಬಿಳಿ ಕುದುರೆಗೆ ಹಸುರು ಬಾಲ.

೧೮೫ ಬಿಳಿಯ ಹೊಲದಲ್ಲಿ ಕರಿಯ ಬೀಜವನ್ನು ಹಾಕಿರುವುದು ಕೈಯಲ್ಲಿ, ಆರಿಸುವುದು ಬಾಯಿಯಲ್ಲಿ.

೧೮೬ ಬೀದಿಯಲಿ ಮಾರೋನ ಹೆಗಲೇರಿ ಬರುವಳು;
ಬಾಯೊಂದು ಕರೆದರೆ ಓ ಎನ್ನುತಿಹಳು;
ಕರೆದ ಭಾಮಿನಿಯರ ಕೈಯ್ಯನೇರುವಳು.

೧೮೭ ಬೆಟ್ಟದಲ್ಲಿ ಜನನ, ಭೂಮಿಯಲ್ಲಿ ಚಲನ, ಶರಧಿಯಲ್ಲಿ ಮಿಲನ.

೧೮೮ ಬೆನ್ನ ಮೇಲೆ ಮಲಗಿರುತ್ತೆ, ಬಹುಧಾನ್ಯ ತಿನ್ನುತ್ತೆ,
ಚೀರುತ್ತೋ ಬಲು ಚೀರುತ್ತೆ.

೧೮೯ ಬೆಳಗಾಗಲಿ ಬೆಳಗಾಗಲಿ ಎನ್ನುತ್ತದೆ ಒಂದು,
ಬೆಳಗಾಗದಿರಲಿ ಬೆಳಗಾಗದಿರಲಿ ಎನ್ನುತ್ತದೆ ಇನ್ನೊಂದು,
ಬೆಳಗಾದರೇನು ಬೆಳಗಾಗದಿದ್ದರೇನು? ಎನ್ನುತ್ತದೆ ಮತ್ತೊಂದು.

೧೯೦ ಬೆಳಕು ಕೊಡುವುದು ಬೆಂಕಿಯಲ್ಲ
ಉರಿಯುವುದು ಬಿಸಿಲಲ್ಲ.

೧೯೧ ಬೆಳ್ಳಿ ಗಿಂಡೀಲಿ ಚಿನ್ನದ ಚೂರು.

೧೯೨ ಬೆಳ್ಳಿಯ ಮೂರ್ತಿಗೆ ಚಿನ್ನದ ಕವಚ.

೧೯೩ ಬೆಳ್ಳಿಯ ಚಡಿ, ನೆಲಕ್ಕೆ ಹೊಡಿ.

೧೯೪ ಬೆಳ್ಳಿಯ ಕೋಲನ್ನು ಹಾಕುವವರುಂಟು, ತೆಗೆವವರಿಲ್ಲ.

೧೯೫ ಬೇಕಾದವನು ಕೊಂಡುಕೊಳ್ಳುವುದಿಲ್ಲ, ಕೊಂಡುಕೊಂಡವನು ಉಪಯೋಗಿಸುವುದಿಲ್ಲ.

೧೯೬ ಮಣ್ಣು ಅಗೆದೆ ಕಲ್ಲು ಸಿಕ್ಕಿತು; ಕಲ್ಲು ಅಗೆದೆ ಬೆಳ್ಳಿ ಸಿಕ್ಕಿತು; ಬೆಳ್ಳಿಯೊಡೆದೆ ನೀರು ಸಿಕ್ಕಿತು.

೧೯೭ ಮಣಿ ಮಣಿಗಾರ, ಮಣಿ ಶೃಂಗಾರ, ರಾಜಕುಮಾರ, ನೋಡೆ ಮನೋಹರ, ಮುಟ್ಟಿದರೆ ಹರಹರ.

೧೯೮ ಮನೆಗೆ ಬಂದರೆ ನೇತು ಹಾಕುವರು, ಗುಂಪು ಕೂಡಿದರೆ ಹೊಡೆಯುವರು.

೧೯೯ ಮನೇ ಮೇಲೆ ಮನೆ ಕಟ್ಟಿ, ಗುಡೀ ಮೇಲೆ ಗುಡಿ ಕಟ್ಟಿ, ಕೊನೇ ಮೇಲೆ ಕೂತವನೆ ಕೊನಾರ್ ಸೆಟ್ಟಿ.

೨೦೦ ಮರ ಕಂಡರೆ ಏರುತ್ತೆ, ಇಲ್ಲವಿದ್ದರೆ ಮಲಗುತ್ತೆ, ನೀರಿಲ್ಲದಿದ್ದರೆ ಸಾಯುತ್ತೆ.

೨೦೧ ಮರದ ಮೇಲೆ ಹಣ್ಣು, ಹಣ್ಣಿನ ಮೇಲೆ ಮರ.

೨೦೨ ಮರವನ್ನು ಹತ್ತುವನು—ಮಂಗನಲ್ಲ
ಬಾಲತೋರವಿದ್ದರೂ ನರಿಯಣ್ಣನಲ್ಲ,
ಹಲ್ಲುಗಳು ಚೂಪಿಹವು ಬಾವಲಿಯೂ ಅಲ್ಲ.

೨೦೩ ಮರದಲ್ಲಿ ವಾಸಿಸುತ್ತಿದ್ದರೂ ಪಕ್ಷಿಯಲ್ಲ,
ನಾರುವಸ್ತ್ರವನ್ನುಟ್ಟರೂ ಯೋಗಿಯಲ್ಲ,
ಮೂರು ಕಣ್ಣುಗಳಿದ್ದರೂ ಈಶನಲ್ಲ,
ನೀರನೊದಗಿಸುವೆನಾದರೂ ಮೇಘವಲ್ಲ.

೨೦೪ ಮುರುಕು ರೊಟ್ಟಿ, ಅವರೆ ಕಾಳು,
ಹಸಿದವನ ಸಮಯಕ್ಕಿಲ್ಲ.

೨೦೫ ಮುಂದೆ ರಾಜ, ಹಿಂದೆ ಪ್ರಜೆಗಳು

೨೦೬ ಮೂರು ಕಾಲಿನ ಮೂರು ಮುಖದ ರಾಣಿ,
ನೀರು ಕುಡಿದು ಕಟ್ಟಿಗೆ ತಿನ್ನುತ್ತಾಳೆ.

೨೦೭ ಮೂರು ದಾರಿಗೆ ಮೂರು ಕಣ್ಣು
ನೀರು ಸುರಿಯುವ ಒಂದೇ ಕಣ್ಣು,
ನಾರು ಸುತ್ತಿದ ಕುರುಡು ಕಣ್ಣು,
ಊರ ದೇವರಿಗೆ ಹೇಳಿದ ಹಣ್ಣು.

೨೦೮ ಮೂರು ಜನ ಗೆಳೆಯರು ನೀರಿಗೆ ಬಿದ್ದರೆ ಒಬ್ಬನು ತೇಲುತ್ತಾನೆ, ಮತ್ತೊಬ್ಬ ಮುಳುಗುತ್ತಾನೆ, ಮಗದೊಬ್ಬ ಕರಗುತ್ತಾನೆ.

೨೦೯ ಮೇಲೆ ನೋಡಿದರೆ ನಾನಾ ಬಣ್ಣ, ಉಜ್ಜಿಕೊಂಡರೆ ಒಂದೇ ಬಣ್ಣ.

೨೧೦ ಮೈಯೆಲ್ಲಾ ಬೂದಿ, ತಲೆಯಲ್ಲಿ ಸಂಡಿಗೆ, ಕೈಯಲ್ಲಿ ಹಪ್ಪಳ.

೨೧೧ ಮೊಗ್ಗಾಗಿ ಅರಳುವುದು ಹೂಜಾತಿಯಲ್ಲ,
ಉಗ್ಗಡಿಸಿ ನೋಡಿದರೆ ಪರಿಮಳವೆಯಿಲ್ಲ,
ದುರ್ಗಾಧಿಪತಿಗೂ ಇದು ಬೇಕಾಯಿತಲ್ಲ.

೨೧೨ ರಥ ಹೋಗ್ತಾ ಇದೆ, ಹೂವು ಬೀಳ್ತಾ ಇದೆ.

೨೧೩ ರಾಜನ ರೂಪು ನೋಡಲು ಅಂದ, ಮುಟ್ಟಿದರೆ ಕೊಂದ.

೨೧೪ ರಾಜನು ಕ್ಷೀಣವಾದರೆ ಪ್ರಜೆಗಳು ಬಲಿಷ್ಠರಾಗುತ್ತಾರೆ.

೨೧೫ ರಾಯರ ಬಾವಿ ಆರಿದಾಗ ಹಳದಿಯ ಹಕ್ಕಿ ಹಾರುತ್ತೆ.

೨೧೬ ರೂಪವಿಲ್ಲ, ಬಣ್ಣವಿಲ್ಲ, ರುಚಿ ಇಲ್ಲ,
ಇದನ್ನು ಬಿಟ್ಟರೆ ಗತಿಯಿಲ್ಲ.

೨೧೭ ವನದಲ್ಲಿ ಹೆಚ್ಚಾಗಿ ನೀರಿಲ್ಲದ ಕಡೆ ಬೆಳೆಯುವ ಒಣಗಿದ ಗಿಡ, ಆದರೂ ಜನರಿಗೆ ಹೆಚ್ಚು ಪ್ರಯೋಜನಕರ. ನಾನಾರು?

೨೧೮ ಶೂರ! ಸಮುದ್ರದ ಮೇಲೆ ಓಡುತ್ತಾನೆ.

೨೧೯ ಸರಸರವೆನ್ನುವುದು—ಸರ್ಪವಲ್ಲ,
ಜನಿವಾರ ಹಾಕುವುದು—ಬ್ರಾಹ್ಮಣನಲ್ಲ,
ನಾರಿಯರ ಕೈಹಿಡಿಯುವುದು—ಪತಿಯಲ್ಲ,
ಈ ಮೂರು ಹೇಳಬಲ್ಲವನು—ದಡ್ಡನಲ್ಲ.

೨೨೦ ಸರ್ರನೆ ಹೋಗುತ್ತೆ, ಭರ್ರನೆ ಬರುತ್ತೆ.

೨೨೧ ಸ್ವರ್ಗದಿಂದ ಬಂತು, ಬಂದಾಗ ಇತ್ತು, ಇಟ್ಟಾಗ ಇಲ್ಲ

೨೨೨ ಸಾವಿರ ಗಿಳಿಗಳಿಗೆ ಒಂದೇ ಕೊಕ್ಕು.

೨೨೩ ಸಾವಿರ ಮಕ್ಕಳಿಗೆ ಒಂದೇ ಉಡಿದಾರ.

೨೨೪ ಸಾವಿರ ಕಣ್ಣುಗಳುಂಟು ರಾಕ್ಷಸನಲ್ಲ, ತಲೆಯಲ್ಲಿ ಕಿರೀಟ ಉಂಟು ಅಧಿಪತಿಯಲ್ಲ, ನರ್ತನ ಮಾಡುವುದು ನರ್ತಕಿಯಲ್ಲ.

೨೨೫ ಸಾಸಿವೆಕಾಳು ಗಾತ್ರ ಸೆಗಣಿ, ಊರೆಲ್ಲಾ ಸಾರಿಸಿ ಇನ್ನೂ ಮಿಗುತ್ತೆ.

೨೨೬ ಸಾಸಿವೆಗಿಂತಲೂ ಸಣ್ಣ, ತಾಳುವೆ ಮೂರು ಬಣ್ಣ.

೨೨೭ ಸಿಂಬಳಬುರುಕ ಸಂತೆಗೆ ಹೋದ.

೨೨೮ ಸುತ್ತಮುತ್ತಲೂ ಬೇಲಿ ಹಾಕಿ, ಸುವ್ವರಯ್ಯನ ಕಾವಲಿಟ್ಟು, ತೋಟದಲ್ಲಿ ಹೂ ಬಿಟ್ಟರೆ, ಮನೆ ಹಾಳು.

೨೨೯ ಸುತ್ತಿನಲ್ಲಿ ಕೆಂಪಿರುವೆ ಮತ್ತೆ ಬಿಳಿದಾಗಿದ್ದು ಮಧ್ಯದಲಿ ಕಪ್ಪಾಗಿ ಹೊಳೆಯುವ ನಾನಾರು?

೨೩೦ ಸುತ್ತುಮುತ್ತು ಸುಣ್ಣಗೋಡೆ, ಎತ್ತ ನೋಡಿದರೂ ಬಾಗಿಲಿಲ್ಲ.

೨೩೧ ಸೊಟ್ಟಪಟ್ಟ ಬಾವಿ, ಒಂದು ಗುಡ್ಡ, ಒಂದೇ ಒಂದು ಎಲೆ, ಮೂವತ್ತೆರಡು ಬಿಳಿ ಜನರು.

೨೩೨ ಸೊಂಡಿಲಿದೆ—ಆನೆಯಲ್ಲ, ಹತ್ತಿರ ಹಾವು ಇದೆ—ಶಿವನಲ್ಲ, ಕೈಗಳು ನಾಲ್ಕಿವೆ —ವಿಷ್ಣುವಲ್ಲ, ಇದು ಬಲ್ಲವರಿಗೆ ಅರಿದಿಲ್ಲ.

೨೩೩ ಸೂರ್ಯನೇ ತಂದೆ, ಸಮುದ್ರವೇ ತಾಯಿ, ನನ್ನ ಬಿಟ್ಟು ಊಟಮಾಡುವರಿಲ್ಲ.

೨೩೪ ಹಗಲೆಲ್ಲಾ ಪ್ರವಾಹ, ರಾತ್ರಿಯೆಲ್ಲಾ ಬರೀ ನೆಲ.

೨೩೫ ಹಣೆಯ ಮೇಲೆರಡು ಕೈ, ಹಣೆಯೇ ಅದಕೆಲ್ಲ ಮೈ, ಕೊಟ್ಟರೆ ಅದಕುಂಟು ಪ್ರಾಣ, ನಾನಾ ಲೋಹದ ತ್ರಾಣ.

೨೩೬ ಹತ್ತು ಸಾಸಿರ ಕಣ್ಣು ನೆತ್ತಿಲಾದರು ಬಾಲ।
ಹುತ್ತಿನ ಹುಳವ ಹಿಡಿಯುವುದು ಕವಿಜನಕ।
ಮೊತ್ತವಿದ ಹೇಳಿ ಸರ್ವಜ್ಞ।

೨೩೭ ಹದಿನಾರು ಲಾಯಂಗಳುಳ್ಳೊಬ್ಬ ಸೆಟ್ಟಿ।
ಕುದುರೆಗಳ ಆರಾರು ಹೆಚ್ಚು ತಲೆ ಕಟ್ಟಿ।
ಚದುರ ಸಾಲಿಂಗೆ ಸಾವಿರವೆಂಬ ಪಟ್ಟಿ।
ಇದ ಹೇಳಬಲ್ಲವರು ಲೆಕ್ಕದಲ್ಲಿ ಗಟ್ಟಿ।

೨೩೮ ಹತ್ತುವ ಕುದುರೆ, ಇಳಿಯುವ ಕುದುರೆ, ಮೈ ತುಂಬ ತೂತಿನ ಕುದುರೆ.

೨೩೯ ಹರೆಯದಲ್ಲಿ ಹಸುರು, ಬೆಳೆವಾಗ ಕೆಂಪು, ಮುಪ್ಪು ಬರುತ್ತಲೆ ಕಪ್ಪು.

೨೪೦ ಹಲ್ಲು ನಾಲಗೆ ಇಲ್ಲ, ಸೊಲ್ಲು ಸೋಜಿಗವಲ್ಲ,
ಕೊಲ್ಲದೇ ಮೃಗವ ಹಿಡಿಯುವುದು ಲೋಕದೊಳ–।
ಗೆಲ್ಲ ಠಾವಿನಲಿ ಸರ್ವಜ್ಞ ।

೨೪೧ ಹಸುರು ಗಿಡದ ಮೇಲೆ ಮೊಸರು ಚೆಲ್ಲಿದೆ.

೨೪೨ ಹಸುರು ಪೆಟ್ಟಿಯಲ್ಲಿ ಕೆಂಪು ಮರಿಗಳು

೨೪೩ ಹಸುರು ಅಮಲ್ದಾರ, ಗಿಣಿಮೂತಿ ಸುಭೇದಾರ,
ಯುಗಾದಿ ಬಂದರೆ ತಗಾದೆ ಮಾಡ್ತಾನೆ.

೨೪೪ ಹಸುರು ಮರದಿಂದ ಇದ್ದಿಲು ಸುರಿಯುತ್ತೆ.

೨೪೫ ಹಸು ಕೂಸಿಗೆ ಹಸುರಂಗಿ.

೨೪೬ ಹಸು ಮಲಗಿದೆ ಹಗ್ಗ ಮೇಯುತ್ತಿದೆ.

೨೪೭ ಹಳದಿ ಕೋಟೆ ದಾಟಿದರೆ ಕೆಂಪು ಕೋಟೆ,
ಕೆಂಪು ಕೋಟೆ ದಾಟಿದರೆ ಕರಿ ಸಿಪಾಯಿಗಳು.

೨೪೮ ಹಳ್ಳದ ಹಂದಿ ಬೆಟ್ಟಕ್ಕೇರಿ, ದಾಡೆ ಮಸೆದು ಬಾಲ ಬೀಸಿ ಡುರುಗುಟ್ಟಿದರೆ,
ಎಲ್ಲೆಲ್ಲೂ ಮುತ್ತು ಸುರಿದೀತು.

೨೪೯ ಹಂಗಾಮಿ ಕಟ್ಟಿ, ಮಲ್ಲಿಗೆ ಬಿಟ್ಟೆ, ಇದರೊಳಗೈವರ ನೃತ್ಯವು ನಿತ್ಯ.

೨೫೦ ಹಾರಿದರೆ ಹನುಮಂತ, ಕೂತರೆ ಮುನಿ,
ಕೂಗಿದರೆ ಕಾಡಿನೊಡೆಯ.

೨೫೧ ಹಾಸಿದ ಚಾಪೆ ಮಡಿಸುವವರಿಲ್ಲ,
ಚೆಲ್ಲಿದ ಹಣವನ್ನು ಎಣಿಸುವವರಿಲ್ಲ

೨೫೨ ಹಿಡಿದರೆ ಹಿಡಿ ತುಂಬಾ, ಬಿಟ್ಟರೆ ಮನೆ ತುಂಬಾ.

೨೫೩ ಹಿಡಿದರೆ ಕೈ ತುಂಬಾ, ಬಿಟ್ಟರೆ ಹೊಳೆ ತುಂಬಾ,
ಪಾತಾಳದ ಪಾಪಚ್ಚಿಯನ್ನು ತರುತ್ತದೆ,
ತಾನು ತಿನ್ನುವುದಿಲ್ಲ, ಒಡೆಯನಿಗೆ ಕೊಡುತ್ತದೆ.

೨೫೪ ಹುಟ್ಟುತ್ತಲೆ ಹುಡುಗ ಟೊಪ್ಪಿಗೆ ಹಾಕಿರುತ್ತೆ.

೨೫೫ ಹುಲ್ಲು ಮುಳ್ಳುಗಳು ಇಲ್ಲದ ಪ್ರದೇಶದಲ್ಲಿ ದನವು ಮೇಯುತ್ತಾ ಹೋಗುತ್ತದೆ

೨೫೬ ಹೊಕ್ಕಿದ್ದು ಒಂದಾಗಿ ಹೊರಟದ್ದು ನೂರಾಗಿ.

೨೫೭ ಹೊರಗಿನ ಕೋಟೆಯು ಸಿಂಗಾರ,
ಒಳಗಿನ ಮಣಿಗಳು ಬಂಗಾರ,
ತಿಂದರೆ ಅದನು ಹಾಹಾಕಾರ,
ಹೇಳುವವನಿದ್ದರೆ ಬಲು ಧೀರ.

೨೫೮ ಹೊಟ್ಟೆ ಓಟ್ಟೆಗೆ, ಜುಟ್ಟು ನೆಟ್ಟಗೆ.

ಉತ್ತರಗಳು.

೧ ಹಸುರು ಚುಚ್ಚುವುದು. ೨ ಒಲೆ. ೩ ಕೊಳಲು, ತೆಂಗು, ಅಡಿಕೆ. ೪ ಚೇಳು. ೫ ಹಂಡೆ, ಕೊಡ, ತಪ್ಪಲೆ. ೬ ಬೀಸುವಕಲ್ಲು. ೭ ಮಾಗುತಿ. ೮ ನೀರುಳ್ಳಿ. ೯ ದೇಹ. ೧೦ ಕಡೆಯುವಕಲ್ಲು. ೧೧ ಲಾಟಾನು. ೧೨ ಅತ್ತಿಕಾಯಿ, ಮಾವಿನಕಾಯಿ, ಸೌತೆಕಾಯಿ, ಅಡಿಕೆ, ಸೋರೇಕಾಯಿ, ಸೀಗೇಕಾಯಿ. ೧೩ ಕಡುಬು. ೧೪ ಊದುವಕೊಂಬು. ೧೫ ಬಾಗಿಲು. ೧೬ ತುಟಿ. ೧೭ ಜಲಡೆ. ೧೮ ಕೊಡೆ. ೧೯ ಉಗುರು. ೨೦ ಪಲ್ಲಕ್ಕಿ. ೨೧ ಕಿವಿ. ೨೨ ಕಬ್ಬು. ೨೩ ಉಳುವವ, ಎತ್ತು, ನೇಗಿಲು. ೨೪ ಗೋಮಯ. ೨೫ ಪುಸ್ತಕ. ೨೬ ಬಾಳೆಯಹಣ್ಣು. ೨೭ ನೀರುಳ್ಳಿ. ೨೮ ಸಾಲಿಗ್ರಾಮ. ೨೯ ಅಂಗಾಲು ಮೇಲಾಗಿ ನೀರು ಕುಡಿವಾತ=ಆಡು, ಮೂಗಿನವ=ಆನೆ, ಕರಳಿಲ್ಲದವ=ಮೊಸಳೆ, ತಲೆಯಿಲ್ಲದವ=ಏಡಿ. ೩೦ ಅಂಗಿ. ೩೧ ದೀಪ. ೩೨ ಜಿಂಕೆ. ೩೩ ಏತ. ೩೪ ಹುಣಸೆ ಹುಳಿಕೋಡು. ೩೫ ಗುಡುಗು. ೩೬ ಗಾಳಿಪಟ. ೩೭ ನಯನ. ೩೮ ಹಸುವಿನ ಕೆಚ್ಚಲು. ೩೯ ನೆಲ್ಲಿಕಾಯಿ. ೪೦ ಎಕ್ಕಡ. ೪೧ ತಕ್ಕಡಿ. ೪೨ ಗಾಡಿಯ ಚಕ್ರಗಳು. ೪೩ ಅಡಿಕೆ. ೪೪ ಊಟದ ಎಲೆ. ೪೫ ಗಡಿಯಾರ. ೪೬ ಮಾರ್ಗ. ೪೭ ಎಕ್ಕಡ. ೪೮ ತಗಣೆ. ೪೯ ಸೂರ್ಯ. ೫೦ ಕೊಡ. ೫೧ ಬಲೆ ಮತ್ತು ಮೀನು. ೫೨ ಸೈಕಲು. ೫೩ ಕಣ್ಣುಗಳು ಮತ್ತು ಮೂಗು. ೫೪ ಕನ್ನಡಿ. ೫೫ ಎಕ್ಕಡ, ಬಲೆ, ಕೆರೆ ಮತ್ತು ನೀರು. ೫೬ ಆಲದಮರ. ೫೭ ಬಾಳೆ. ೫೮ ಸೂರ್ಯ. ೫೯ ಒಂದೇ ದೋಸೆ. ೬೦ ಗಡಿಯಾರ. ೬೧ ಕಡಗೋಲು. ೬೨ ಅಡಿಕೆ ಮರ. ೬೩ ಶೇವಿಗೆ. ೬೪ ಕೊಡೆ. ೬೫ ಬದನೆ. ೬೬ ಲವಂಗ. ೬೭ ತೆಂಗಿನಕಾಯಿ. ೬೮ ಚದುರಂಗದಾಟ. ೬೯ ದೀಪ. ೭೦ ಸೂರ್ಯ-ಚಂದ್ರ.

೭೧ ತೆಂಗಿನಕಾಯಿ. ೭೨ ಮೆಣಸು. ೭೩ ಶುಂಠಿ. ೭೪ ಇಲಿಯ ಬಿಲ ೭೫ ಚಂದ್ರ. ೭೬ ತೋಡು. ೭೭ ಒನಕೆ. ೭೮ ಮಿಂಚು. ೭೯ ತಂಬೂರಿ. ೮೦ ಚೇಳು. ೮೧ ಕಟ್ಟಿರುವೆ. ೮೨ ಒನಕೆ. ೮೩ ಉದ್ದು. ೮೪ ಹೆಗ್ಗಣ. ೮೫ ಹೇನು. ೮೬ ಉದ್ದು. ೮೭ ಒನಕೆ. ೮೮ ಅನ್ನ ಬೇಯುವಾಗ ಮೇಲೆ ಬರುವ ನೊರೆ. ೮೯ ಕಟ್ಟಿರುವೆಯ ಸಾಲು. ೯೦ ಸುಣ್ಣ. ೯೧ ಸುಣ್ಣ. ೯೨ ತೆಂಗಿನ ಕಾಯಿ. ೯೩ ಕಳ್ಳಿಗಿಡ. ೯೪ ಅನ್ನ-ಊಟ. ೯೫ ನವಿಲು. ೯೬ ಕಣ್ಣು. ೯೭ ಮಡಕೆ. ೯೮ ಗಣಪತಿ, ಐದು ಹೆಡೆಯ ಸರ್ಪ, ಇಲಿ. ೯೯ ನದಿ ೧೦೦ ಬೆಂಕಿ. ೧೦೧ ತೊಟ್ಟಿಲು. ೧೦೨ ಹಲ್ಲಿ. ೧೦೩ ಸೂಜಿ ನೂಲು. ೧೦೪ ಮಂಜಿನ ಹನಿ. ೧೦೫ ಕೋಳಿ ಮೊಟ್ಟೆ. ೧೦೬ ಪತ್ರಾವಳಿ. ೧೦೭ ಹಣತೆಯ ದೀಪ. ೧೦೮ ಇಡ್ಲಿ. ೧೦೯ ಬೀಗದ ಕೈಗೊಂಚಲು. ೧೧೦ ಅಂಗಿ ೧೧೧ ದೋಣಿ. ೧೧೨ ಮಣ್ಣಿನ ಮಡಕೆ. ೧೧೩ ನೊಣ. ೧೧೪ ಗಾಳಿಪಟ. ೧೧೫ ಸೂಜಿ. ೧೧೬ ಬೀಸುವಕಲ್ಲು. ೧೧೭ ಆಮೆ. ೧೧೮ ಉಪ್ಪು. ೧೧೯ ಸೊಪ್ಪಿನ ಕಡಲೆಕ್ಕಾ. ೧೨೦ ಹರಿಗೋಲು. ೧೨೧ ಸೂಜಿ. ೧೨೨ ಬಾಳೆಗೊನೆ. ೧೨೩ ಗೆದ್ದಲು. ೧೨೪ ಮೂಗುತಿ. ೧೨೫ ಬೆಳ್ಳುಳ್ಳಿ. ೧೨೬ ಹಲ್ಲುಗಳು. ೧೨೭ ಅನನಾಸು. ೧೨೮ ಎಣ್ಣೆ, ದೀಪ. ೧೨೯ ದೋಸೆ. ೧೩೦ ನಕ್ಷತ್ರ. ೧೩೧ ಚೇಳು. ೧೩೨ ಕಪ್ಪೆ. ೧೩೩ ಅಡಿಕೆ ಮರ. ೧೩೪ ಚಂದ್ರ. ೧೩೫ ದಾಳಿಂಬ. ೧೩೬ ದೋಸೆ. ೧೩೭ ಕಡೆಯುವ ಕಲ್ಲು. ೧೩೮ ಸೇವಂತಿಗೆ ಹೂ. ೧೩೯ ನೊಣ. ೧೪೦ ಕುರ್ಚಿ. ೧೪೧ ಹುರುಳಿ. ೧೪೨ ನೀರು ತುಂಬುವ ಕೊಡ. ೧೪೩ ವಿದ್ಯುದ್ದೀಪ. ೧೪೪ ಬೆಟ್ಟ. ೧೪೫ ಬಾಳೆಗೊನೆ ೧೪೬ ಬೆಣ್ಣೆ. ೧೪೭ ಕಣಜದ ಹುಳ ೧೪೮ ಮನುಷ್ಯ. ೧೪೯ ಸೊನ್ನೆ. ೧೫೦ ಚಂದ್ರ. ೧೫೧ ನೆರಳು. ೧೫೨ ಹಾಗಲಕಾಯಿ. ೧೫೩ ಹಜಾಮ. ೧೫೪ ಹಗ್ಗ. ೧೫೫ ಎಕ್ಕಡ. ೧೫೬ ವರ್ಷದ ಮೂರು ಋತುಗಳು ೧೫೭ ಕುರ್ಚಿ. ೧೫೮ ಪಗಡೆ. ೧೫೯ ತೆಂಗಿನಕಾಯಿ. ೧೬೦ ಒಂದೇ ಕಾಗೆ. ೧೬೧ ಭೂಪಟ. ೧೬೨ ದೋಣಿ ೧೬೩ ಉಪ್ಪು. ೧೬೪ ಮುತ್ತು. ೧೬೫ ಪುಸ್ತಕ. ೧೬೬ ಪುಸ್ತಕ. ೧೬೭ ಬೀಸುವ ಕಲ್ಲು. ೧೬೮ ಸೋಡಾ ಬಾಟ್ಲಿ. ೧೬೯ ಮುಳ್ಳು. ೧೭೦ ನಾಲಗೆ. ೧೭೧ ಕೋವಿ. ೧೭೨ ಮೆಣಸು. ೧೭೩ ಹಲಸಿನ ಹಣ್ಣು. ೧೭೪ ಒಲೆಯೂದುವುದು. ೧೭೫ ಗ್ರಾಮಫೋನು. ೧೭೬ ಮುಳ್ಳು. ೧೭೭ ಪೆನ್. ೧೭೮ ನಶ್ಯ. ೧೭೯ ಮೂಗುತಿ. ೧೮೦ ಲೇಖನಿ. ೧೮೧ ಟೆಲಿಫೋನು. ೧೮೨ ಬೀಸುವಕಲ್ಲು. ೧೮೩ ಗುಡ್ಡದ ದಾರಿ. ೧೮೪ ಮುಲ್ಲಂಗಿ. ೧೮೫ ಅಕ್ಷರ, ಓದು. ೧೮೬ ಬಳೆ. ೧೮೭ ಹೊಳೆ. ೧೮೮ ಬೀಸುವಕಲ್ಲು. ೧೮೯ ಹಾಸಿಗೆ, ಒಲೆ, ನೆಲ. ೧೯೦ ವಿದ್ಯುಚ್ಛಕ್ತಿ. ೧೯೧ ಇಲೆಕ್ಟ್ರಿಕ್ ಬಲ್ಬು. ೧೯೨ ಬಾಳೆಹಣ್ಣು. ೧೯೩ ಸಿಂಬಳ. ೧೯೪ ರಂಗೋಲೆ. ೧೯೫ ಮರಣದ ಪೆಟ್ಟಿಗೆ ೧೯೬ ತೆಂಗಿನಕಾಯಿ. ೧೯೭ ಚೇಳು. ೧೯೮ ನಗಾರಿ. ೧೯೯ ಜೇನುನೊಣ.

೨೦೦ ಬಳ್ಳಿ. ೨೦೧ ಅನನಾಸು. ೨೦೨ ಅಳಿಲು. ೨೦೩ ತೆಂಗಿನಕಾಯಿ. ೨೦೪ ಚಂದ್ರ, ನಕ್ಷತ್ರ. ೨೦೫ ಬಾಳೆಗೊನೆ. ೨೦೬ ಗಂಧದ ಕಲ್ಲು. ೨೦೭ ತೆಂಗಿನ ಕಾಯಿ. ೨೦೮ ಎಲೆ, ಅಡಿಕೆ, ಸುಣ್ಣ ೨೦೯ ಸಾಬೂನು. ೨೧೦ ಔಡಲ ಗಿಡ. ೨೧೧ ಕೊಡೆ. ೨೧೨ ಬೀಸುವ ಕಲ್ಲು ೨೧೩ ಹಾವು. ೨೧೪ ಬಾಳೆಗೊನೆ. ೨೧೫ ದೀಪ. ೨೧೬ ನೀರು. ೨೧೭ ಖರ್ಜೂರ. ೨೧೮ ಮೋಡ. ೨೧೯ ಹಗ್ಗ, ರಾಟೆ, ಕೊಡ. ೨೨೦ ಒನಕೆ. ೨೨೧ ಆಲಿಕಲ್ಲು. ೨೨೨ ತೆಂಗಿನ ಗರಿ. ೨೨೩ ಕಸಬರಿಕೆ. ೨೨೪ ನವಿಲು ೨೨೫ ಬೆಂಕಿ. ೨೨೬ ತಲೆಕೂದಲು. ೨೨೭ ಬೆಂಡೆ ಕಾಯಿ. ೨೨೮ ಕಣ್ಣು. ೨೨೯ ಕಣ್ಣು. ೨೩೦ ಮೊಟ್ಟೆ. ೨೩೧ ಚಾಯಿ. ೨೩೨ ಗಣಪತಿ. ೨೩೩ ಉಪ್ಪು. ೨೩೪ ಅಂಗಡಿ ಬೀದಿ. ೨೩೫ ಗಡಿಯಾರ. ೨೩೬ ನವಿಲು.

೨೩೭

೨೫೩	೨೯೫	೨೨೯	೨೨೩
೨೪೧	೨೧೧	೨೬೫	೨೮೩
೨೭೧	೨೭೭	೨೪೭	೨೦೫
೨೩೫	೨೧೭	೨೫೯	೨೮೯

೨೩೮ ದೋಸೆ. ೨೩೯ ನೇರಳೆಹಣ್ಣು. ೨೪೦ ಒಲೆ. ೨೪೧ ಮಲ್ಲಿಗೆಹೂ. ೨೪೨ ದಾಳಿಂಬ. ೨೪೩ ಮಾವಿನಹಣ್ಣು. ೨೪೪ ನೇರಳೆಹಣ್ಣು ೨೪೫ ಬಾಳೇಕಾಯಿ. ೨೪೬ ಕುಂಬಳ ಬಳ್ಳಿ. ೨೪೭ ಪಪ್ಪಾಯಿ. ೨೪೮ ಮಳೆ. ೨೪೯ ಬಟ್ಟಲು, ಅನ್ನ, ಕೈಬೆರಳುಗಳು. ೨೫೦ ಕಪ್ಪೆ. ೨೫೧ ಭೂಮಿ, ನಕ್ಷತ್ರ ೨೫೨ ದೀಪದ ಬೆಳಕು. ೨೫೩ ಬಲೆ. ೨೫೪ ಬದನೆ. ೨೫೫ ದೋಣಿ. ೨೫೬ ಶೇವಿಗೆ. ೨೫೭ ಮೆಣಸಿನ ಕಾಯಿ. ೨೫೮ ತೆಂಗಿನಕಾಯಿ.

ಒಂದಾಣೆ ಮಾಲೆಯಲ್ಲಿ....

ಪ್ರತಿ ಶನಿವಾರ ಒಂದು ಹೊಸ ಪುಸ್ತಕ ಹೊರಡುತ್ತಿದೆ!

ಪ್ರತಿಯೊಂದಕ್ಕೆ ಒಂದಾಣೆ!

●

"ಒಗಟುಗಳ" ಇನ್ನೊಂದು ಭಾಗ
("ಜಾಣ್ಮೆಯ ಒಗಟುಗಳು—ಪುಸ್ತಕ ನಂಬ್ರ 29)ದಲ್ಲಿ 245 ಒಗಟುಗಳಿವೆ.

●

ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ
"ಭಾರತದ ಮಂತ್ರಿಮಂಡಲಗಳು" (ನಂಬ್ರ 41) ಈ ಪುಸ್ತಕದಲ್ಲಿ
ಭಾರತದ ಎಲ್ಲಾ ರಾಜ್ಯಗಳ ಮತ್ತು ಮಂತ್ರಿಮಂಡಲಗಳ ಹೆಸರುಗಳಿವೆ.

●

ನಂಬ್ರ 43ನೇ "ಭಾರತದ ನಾಲ್ಕು ಕಲಶಗಳು" ಎಂಬ ಪುಸ್ತಕದಲ್ಲಿ,
ರಾಷ್ಟ್ರಧ್ವಜ-ರಾಷ್ಟ್ರಗೀತೆಗಳ ವಿವರಣೆ, ಅರ್ಥ ಎಲ್ಲವೂ ಇದ್ದು,
ಇದು ಸಕಲರಿಗೂ ಅತ್ಯುಪಯುಕ್ತವಾಗಿದೆ.

●

ಏಕಾಂಕ ಪ್ರಹಸನಗಳು, ನೀತಿಪರ ಕಥೆಗಳು, ಕ್ಷೇತ್ರ ವಿವರ,
ಇನ್ನೂ ಹಲವು ವಿಷಯಗಳಲ್ಲಿ ಪುಸ್ತಕಗಳಿವೆ;
ಇನ್ನೂ ಪ್ರಕಟವಾಗುತ್ತಿವೆ.

●

ಕಡಿಮೆ ಬೆಲೆಗೆ 'ಒಂದಾಣೆ ಮಾಲೆ'ಯು ಕೊಟ್ಟಷ್ಟು
ಪುಟಗಳನ್ನು ಇನ್ನಾವ ಪ್ರಕಟಣೆಯೂ ಕೊಟ್ಟಿಲ್ಲ.

●

ನಿಮ್ಮ ಊರಿನ ನ್ಯೂಸ್ ಏಜಂಟರಲ್ಲೂ, ಪುಸ್ತಕ ವ್ಯಾಪಾರಿಗಳಲ್ಲೂ ವಿಚಾರಿಸಿರಿ.

ಒಂದಾಣೆ ಮಾಲೆ,
ಪ್ರಭಾತ ಆಫೀಸು, ರಥಬೀದಿ, ಮಂಗಳೂರು—1.

Edited, Printed and Published by K. V. Shenoy
at The Prabhat Printers, Ltd., Mangalore-1.